ಸಂ. 12650
27 JAN 2007
ಬೆಂಗಳೂರು-560 001

# ಕರ್ನಾಟಕ ಸರ್ಕಾರದ ನಡವಳಿಗಳು

## (ಜಲಸಂಪನ್ಮೂಲ ಇಲಾಖೆ)

ವಿಷಯ:- ಶಿವಮೊಗ್ಗ ತಾಲ್ಲೂಕಿನ ನಿಧಿಗೆ ಕೆರೆ ಮತ್ತು ಪುರಲೇ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ವಹಿಸುವ ಬಗ್ಗೆ.

.....................

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕನೀನಿನಿ/ನಿಧಿಗೆ,ಪುರಲೆಕೆರೆ/2006/2699 ದಿ:15.09.2006.

ಪ್ರಸ್ತಾವನೆ:-

ಶಿವಮೊಗ್ಗ ತಾಲ್ಲೂಕಿನ ನಿಧಿಗೆ ಕೆರೆಯು ಭದ್ರಾ ಯೋಜನೆಯ ಭದ್ರಾ ಎಡದಂಡೆ ಕಾಲುವೆಯ ಅಚ್ಚುಕಟ್ಟಿನಲ್ಲಿ ಬರುತ್ತಿದ್ದು, ಈ ಕೆರೆಗೆ ಭದ್ರಾ ಎಡದಂಡೆ ಕಾಲುವೆಯಿಂದ ನೀರು ಹರಿಸಲಾಗುತ್ತಿದೆ. ಶಿವಮೊಗ್ಗ ತಾಲ್ಲೂಕಿನ ಪುರಲೆಕೆರೆಯು ತುಂಗಾ ಯೋಜನೆಯ ಬಲದಂಡೆ ಕಾಲುವೆಯ ವ್ಯಾಪ್ತಿಯಲ್ಲಿ ಬರುತ್ತಿದ್ದು, ಈ ಕೆರೆಗೆ ತುಂಗಾ ಬಲದಂಡೆ ಕಾಲುವೆಯಿಂದ ನೀರನ್ನು ಒದಗಿಸಲಾಗುತ್ತಿದೆ.

ನಿಧಿಗೆ ಕೆರೆಯು ಶಿವಮೊಗ್ಗ ಹಾಗೂ ಭದ್ರಾವತಿ ನಗರಗಳ ಮಧ್ಯೆ ಇದ್ದು, ಕೆರೆಯಲ್ಲಿ ಸಾಕಷ್ಟು ಹೂಳು ತುಂಬಿಕೊಂಡಿರುತ್ತದೆ. ಶಿವಮೊಗ್ಗ ಹಾಗೂ ಭದ್ರಾವತಿ ನಗರಗಳ ಮಧ್ಯದ ಪ್ರದೇಶವು ಬಹಳ ವೇಗವಾಗಿ ಬೆಳೆಯುತ್ತಿದ್ದು, ಈ ಪ್ರದೇಶದಲ್ಲಿ ಯಾವುದೇ ಜಲವಿಹಾರ ಅನುಕೂಲತೆಗಳು ಇರುವುದಿಲ್ಲ.

ಪುರಲೆ ಕೆರೆಯು ಶಿವಮೊಗ್ಗ ಹೊಳೆ ಹೊನ್ನೂರು ರಸ್ತೆಯಲ್ಲಿದ್ದು, ಈ ಕೆರೆಯಲ್ಲೂ ಕೂಡ ಸಾಕಷ್ಟು ಹೂಳು ತುಂಬಿರುತ್ತವೆ. ಈ ಎರಡು ಕೆರೆಗಳನ್ನು ಅಭಿವೃದ್ಧಿ ಪಡಿಸಿ ಕೆರೆಗಳ ಅಚ್ಚುಕಟ್ಟಿಗೆ ನೀರೊದಗಿಸುವುದಲ್ಲದೇ, ಕೆರೆಗಳನ್ನು ವಿಹಾರ ಕೇಂದ್ರಗಳನ್ನಾಗಿ ಮಾಡಲು ಪುರಲೆ ಕೆರೆ ಅಭಿವೃದ್ಧಿಗೆ ಸಂಬಂಧಿಸಿದಂತೆ ರೂ. 940.00 ಲಕ್ಷಗಳ ಹಾಗೂ ನಿಧಿಗೆ ಕೆರೆಗೆ ಸಂಬಂಧಿಸಿದಂತೆ ರೂ. 900.00 ಲಕ್ಷಗಳ ರೇಖಾ ಅಂದಾಜು ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು ಮೇಲೆ ಓದಲಾದ ಪತ್ರದಲ್ಲಿ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಜಸಂಇ 247 ಎಂಎಂಬಿ 2006.

ಬೆಂಗಳೂರು, ದಿನಾಂಕ 24/01/2007.

ಶಿವಮೊಗ್ಗ ತಾಲ್ಲೂಕಿನ ನಿಧಿಗೆ ಕೆರೆ ಹಾಗೂ ಪುರಲೆ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವರವಾದ ಅಂದಾಜು ತಯಾರಿಕೆ ಹಾಗೂ ಅವುಗಳ ಅನುಷ್ಠಾನಗೊಳಿಸುವ ಕೆಲಸವನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ವಹಿಸಲಾಗಿದೆ. ಈ ಎರಡೂ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ವಾರ್ಷಿಕವಾಗಿ ಒದಗಿಸುವ ಹಣದಿಂದ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಮುಂದುವರೆದಿದೆ . . .

-529-



ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಲೋ.ಇ.1191.ಆ.ಕೋ-1/2006 ದಿನಾಂಕ: 23.01.2007ರಲ್ಲಿ ನೀಡಿದ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್. ಶಿವಶಂಕರ್)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-1)
ಜಲಸಂಪನ್ಮೂಲ ಇಲಾಖೆ

ಇವರಿಗೆ:-

1. ಮಹಾಲೇಖಪಾಲರು, (ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
3. ಪ್ರಧಾನ ಇಂಜನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ.
4. ವಿಶೇಷ ಕರ್ತವ್ಯಾಧಿಕಾರಿ ಹಾಗು ಪದನಿಮಿತ್ತ ಉಪಕಾರ್ಯದರ್ಶಿ, (ಲೋಕೋಪಯೋಗಿ ಇಲಾಖೆ, ಆರ್ಥಿಕ ಕೋಶ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಶಾಖಾ ರಕ್ಷಾ ಕಡತ
6. ಹೆಚ್ಚುವರಿ ಪ್ರತಿಗಳು.

ಸೌ. 24.01.2007